"ಅಂದ್ರೆ ನಾನ್ ಸಾಯ್ತೀನಾ?"

"ನೀ ಸಾಯಲಿಕ್ಕೆ ಇನ್ನೂ ತಡವುಂಟು... ಸತ್ತರೂ ಬೇಜಾರು ಇರಲಿಲ್ಲ... ಆದ್ರೆ ಈ ಚೌತಿ ಚಂದ್ರನ ನೀನು ನೋಡಿ ಕೆಟ್ಟೆ... ದೊಡ್ಡ ಅಪವಾದ ನಿನಗೆ ಕಟ್ಟಿಟ್ಟ ಬುತ್ತಿ. ಅಂಥಾ ಕೃಷ್ಣ ದೇವರನ್ನೇ ಬಿಡದಿದ್ದು ನಿನ್ನನ್ನು ಬಿಡ್ತದಾ? ಮನೆಯಿಂದ ಹೊರಗೆ ಹೋಗಲೇ ಬೇಡ... ಆದ್ರೂ ನಿಂಗದು ತಪ್ಪಿದ್ದಲ್ಲ."

"ಇದೇ ತಲೆಬಿಸಿ ನಂಗೆ... ಏನ್ ಮಾಡುವುದು ಈಗ? ಇದಕ್ಕೆ ಪರಿಹಾರ ಏನೂ ಇಲ್ಲವಾ?"

"ಯುಗಾದಿ ಚಂದ್ರನ ನೋಡು... ಅದೇ ಇದಕ್ಕೆ ಪರಿಹಾರ."

"ಯುಗಾದಿಗೆ ಇನ್ನೂ ತುಂಬಾ ತಡ ಇದೆಯಲ್ಲ..."

"ಹೌದಲ್ವ... ಕೃಷ್ಣನಿಗೆ ಚಂದ್ರನನ್ನು ನೋಡಿ ಅಪವಾದ ಬಂದ ಕತೆ ಗೊತ್ತಾ ನಿಂಗೆ? ಶಮಂತಕಮಣಿಯ ಕತೆ. ಆ ಕತೆ ಕೇಳು... ಆಗ ಇದರಿಂದ ತಪ್ಪಿಸಿಕೊಳ್ಳಬಹುದು."

"ಅದನ್ನೆಲ್ಲಿ ಕೇಳುವುದು... ನಿನಗೆ ಗೊತ್ತುಂಟಾ?"

"ನಂಗೆ ಆ ಕತೆ ಸರಿಯಾಗಿ ಗೊತ್ತಿಲ್ಲ... ಅದೊಂದು ಭಕ್ತಿಗೀತೆ ಇದೆ... ಅದನ್ನ ಕೇಳು. ಕೆಲವು ದೇವಸ್ಥಾನದಲ್ಲಿ ಆ ಹಾಡನ್ನು ಹಾಕುತ್ತಿರುತ್ತಾರೆ..."

"ಎಲ್ಲಿ ಅಂತ ಹುಡುಕುವುದು ಅಂತಹ ದೇವಸ್ಥಾನವನ್ನು..."

"ಅದೆಲ್ಲ ನನಗೆ ಗೊತ್ತಿಲ್ಲ. ನೀನು ಚೌತಿ ಚಂದ್ರನನ್ನು ನೋಡಿ ದೊಡ್ಡ ತಪ್ಪು ಮಾಡಿದ್ದಿ... ನೀನು ಮಾತನಾಡದೇ ಇರುವುದೇ ಒಳ್ಳೆಯದು... ಯುಗಾದಿಯ ತನಕ ಆದಷ್ಟು ಜಾಗ್ರತೆ ಮಾಡು. ನನ್ನಪ್ಪ ಒಮ್ಮೆ ಚೌತಿ ಚಂದ್ರನನ್ನು ನೋಡಿದ್ದರಿಂದಾಗಿ ಹೆಗ್ಗಡೆಯವರ ಮನೆಯಲ್ಲಿ ಕಂಬಳದ ಕೋಣ ಕಳೆದು ಹೋದಾಗ ಆ ಅಪವಾದ ಅಪ್ಪನ ಮೇಲೇ ಬಂದಿತ್ತು... ನನ್ನಪ್ಪ ತಪ್ಪಿತಸ್ಥನಲ್ಲ ಎಂದು ತಿಳಿಯುವುದರೊಳಗೆ ಜೈಲಿಗೂ ಹೋಗಿ ಬಂದಿದ್ದ ಗೊತ್ತಾ ನಿಂಗೆ! ನನಗೆ ಈಗ ತಡ ಆಯಿತು... ನಾನು ನಾಣಪ್ಪಯ್ಯರ ಮನೆಗೆ ತೋಟದ ಕೆಲಸಕ್ಕೆ ಹೋಗಬೇಕು" ಎಂದು ಸುಬ್ರಮಣಿ ಅಲ್ಲಿಂದ ಕಾಲ್ಕಿತ್ತ. ಹೋಗುವಾಗ ಚಿಕ್ಕಂದಿನಿಂದಲೂ ಒಟ್ಟಿಗೇ ಇದ್ದ, ಏಳನೆಯ ತನಕ ಜೊತೆಗೇ ಓದಿದ್ದ ಅಪೂರ್ವನನ್ನು ಒಮ್ಮೆ ವಿಕಾರವಾಗಿ ನೋಡಿದ.

★★★

ಬೆಂಗಳೂರಿನಿಂದ ಕೆಲಸಕ್ಕೆ ರಜೆ ಹಾಕಿ ಊರಿಗೆ ಬಂದಿದ್ದ ಪ್ರಭಾತ ಮತ್ತು ಸೂರ್ಯಾಂಶ್ ಸಮುದ್ರ ದಡದಲ್ಲಿ ನಿಂತು ಕೆಂಪಾಗಿ ನೀರೊಳಗೆ ಅಡಗುತ್ತಿರುವ ಸೂರ್ಯನ ಫೋಟೊ ಕ್ಲಿಕ್ಕಿಸುತ್ತಾ ನಿಂತಿದ್ದರು. ದೂರದಲ್ಲಿ ಯಾರೋ ಒಬ್ಬನೇ ಕುಳಿತಿರುವುದನ್ನು ಕಂಡು ಹತ್ತಿರ ಬಂದರು. ಅಪೂರ್ವ ಗಾಢವಾಗಿ ಯೋಚಿಸುತ್ತ ಕುಳಿತಿದ್ದ.

"ಅಪೂರ್ವ... ಹಾಯ್ ಹೇಗಿದ್ದೀಯ? ಏನು ಒಬ್ಬನೆ ಇಲ್ಲಿ ಕುಳಿತಿದ್ದಿ?" ಎಂದ ಸೂರ್ಯಾಂಶ್.

"ಅಪೂರ್ವ ಏನಾಯಿತೋ ನಿಂಗೆ... ಮಾತಾಡುವುದನ್ನೇ ನಿಲ್ಲಿಸಿದ್ದೆಯೆಂತೆ... ಏಕೆ?" ಎಂದ ಪ್ರಭಾತ.

ಅಪೂರ್ವನಿಗೆ ಮಾತನಾಡಲು ಮನಸ್ಸಿಲ್ಲ... ಆದರೂ ಇವರೂ ಸಹ ಸುಬ್ರಮಣಿಯಂತೆ ಚಿಕ್ಕಂದಿನಿಂದಲೂ ಗೆಳೆಯರಾದ ಕಾರಣ ಅವರು ಕೇಳಿದ್ದಕ್ಕಾದರೂ ಉತ್ತರಿಸಬೇಕಿತ್ತು. ನಡೆದುದೆಲ್ಲವನ್ನೂ ಹೇಳಿ ಮುಗಿಸುವಾಗ ಆತ ಗದ್ಗದಿತನಾಗಿದ್ದ.

"ಏಯ್ ನಿಂಗೇನಾಗಿದೆಯೋ ಅದೆಲ್ಲಾ ಮೂಢನಂಬಿಕೆ ಕಣೋ" ಎಂದು ಸೂರ್ಯಾಂಶ್ ಹೇಳಿದ್ದಕ್ಕೆ ಪ್ರಭಾತ ಕೂಡ ತಲೆಯಾಡಿಸಿದ.

"ಇಲ್ಲ, ನನಗೆ ಸುಬ್ರಮಣಿ ಹೇಳಿದ್ದಾನೆ. ಆತನ ಅಪ್ಪನ ಮೇಲೆ ಅಪವಾದ ಬಂದಿತ್ತಂತೆ. ಅಂಥ